## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದೀಪಾಂಜಲಿನಗರ, ವಾರ್ಡ್ ಸಂಖ್ಯೆ-158, ಪಾಲಿಕೆ ಸದಸ್ಯರ ಕಛೇರಿ, 8ನೇ ಮುಖ್ಯರಸ್ತೆ, ಆವಲಹಳ್ಳಿ ಬಿಡಿಎ ಬಡಾವಣೆ, (ಅಭಯ ಆಂಜನೇಯ ದೇವಸ್ಥಾನ ಹತ್ತಿರ)ಬೆಂಗಳೂರು-560 026

---

ಸಂಖ್ಯೆ: ಸ.ಕಾ.ನಿ.ಅ/ಗಾಅ/ಪಿಆರ್/ /21-22

ದಿನಾಂಕ:-07-04-2022

ವಾರ್ಡ್ ಸಂಖ್ಯೆ : 158 ವಾರ್ಡ್ ಸಭೆಯ ನಡವಳಿ

**ಸಭೆಗೆ ಹಾಜರಾಗಿ ಭಾಗವಹಿಸಿದ ಸದಸ್ಯರು ಮತ್ತು ಸಾರ್ವಜನಿಕರ ವಿವರ:**

| ಕ್ರಮ ಸಂಖ್ಯೆ | ಅಧಿಕಾರಿಗಳು ಮತ್ತು ಸದಸ್ಯರುಗಳ ಹೆಸರು | ಪದನಾಮ/ಅಧ್ಯಕ್ಷರು | ಹಾಜರಾತಿ |
|---|---|---|---|
| 1 | ಶ್ರೀಂತಿ. ಚೈತ್ರ .ಜಿ.ಎಸ್. | ಕಾರ್ಯದರ್ಶಿ | ಹಾಜರಾಗಿರುತ್ತಾರೆ |
| 2 | ಶ್ರೀ. ಮಂಜುನಾಥ .ಎನ್. | ಜಲ ಪರಿವೀಕ್ಷಕರು ಬಿ.ಡಬ್ಲ್ಯೂ.ಎಸ್.ಎಸ್.ಬಿ. | ಹಾಜರಾಗಿರುತ್ತಾರೆ |
| 3 | ಶ್ರೀ. ನಾಗರಾಜು .ಸಿ. | ಪೊಲೀಸ್ ಬ್ಯಾಟರಾಯನಪುರ | ಹಾಜರಾಗಿರುತ್ತಾರೆ |
| | ಶ್ರೀ. ಚಂದ್ರಶೇಖರ್ .ಜಿ.ಆರ್. | ಬೆಸ್ಕಾಂ | ಹಾಜರಾಗಿರುತ್ತಾರೆ |
| 4 | ಶ್ರೀ. ಹೆಚ್. ಮಂಜುನಾಥ್ | ಕಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಾಗಿರುತ್ತಾರೆ |

**ಸಭೆಗೆ ಹಾಜರಿದ್ದ ಸಾರ್ವಜನಿಕರು**

1. ಶ್ರೀಮತಿ. ರಾಜೇಶ್ವರಿ .ಬಿ.ಟಿ.
2. ಶ್ರೀಮತಿ. ಗಿರಿಜಮ್ಮ
3. ಶ್ರೀಮತಿ. ನವ್ಯಶ್ರೀ
4. ಶ್ರೀಮತಿ. ಶ್ರೀಲತ
5. ಶ್ರೀ ಎಸ್. ಶ್ರೀನಿವಾಸ ಮೂರ್ತಿ
6. ಶ್ರೀ. ರಾಜು
7. ಶ್ರೀ. ಶ್ರೀನಿವಾಸ್ .ಎಂ.ವಿ.
8. ಶ್ರೀ. ವಿನೋದ್ ಕುಮಾರ್ .ಆರ್.

ಸಮಿತಿಯ ಕಾರ್ಯದರ್ಶಿಯವರು ಹಾಜರಿದ್ದ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಮತ್ತು ಸದಸ್ಯರುಗಳಿಗೆ ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತ ಕೋರಿದ ನಂತರ ಸಭೆಯನ್ನು ಆರಂಭಿಸಲಾಯಿತು.

ಈ ಹಿಂದಿನ ಸಭೆಯಲ್ಲಿ ಬಂದಿದ್ದ ದೂರುಗಳ ಮೇಲೆ ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸುತ್ತ ಪ್ರಸ್ತುತ ಕುಂದು ಕೊರತೆಗಳ ಬಗ್ಗೆ ಚರ್ಚೆ ಪ್ರಾರಂಭಿಸಲಾಯಿತು.

ಪ್ರೈಡ್ ಅಪಾರ್ಟ್‌ಮೆಂಟ್‌ನವರು ಟ್ರೀಟೆಡ್ ವಾಟರ್‌ನ್ನು ರಂಗನಾಥ ಕಾಲೋನಿಯ 1ನೇ ಮುಖ್ಯರಸ್ತೆಯ ಚರಂಡಿಗೆ ಬಿಡುತ್ತಿದ್ದಾರೆ ಇದರಿಂದ ದುರ್ವಾಸನೆ ಬರುತ್ತಿದ್ದು ಸ್ಥಳೀಯರು ವಾಸಮಾಡಲು ತೊಂದರೆಯಾಗುತ್ತಿದೆ ಎಂದು ಸಾರ್ವಜನಿಕರು ದೂರನ್ನು ನೀಡಿರುತ್ತಾರೆ ಮತ್ತು ವೀರಭದ್ರ ನಗರದಲ್ಲಿ ಕೆಲವು ಕೊಳವೆ ಬಾವಿಗಳು ಚಾಲ್ತಿಯಲ್ಲಿ ಇಲ್ಲದೆ ಇರುವ ಕೊಳವೆ ಬಾವಿಯನ್ನು ತಪಾಸಣೆ ಮಾಡಿ ಮೀಟರ್ ಕನೆಕ್ಷನ್ ಕಡಿತಗೊಳಿಸುವಂತೆ ದೂರನ್ನು ನೀಡಿದರು.

ಕ್ರಮ : ಬಿ.ಡಬ್ಲ್ಯೂಎಸ್.ಎಸ್.ಬಿ. ಇಲಾಖೆ

5ನೇ ಅಡ್ಡರಸ್ತೆ, ಕಾಳಿಕಾಂಬ ದೇವಸ್ಥಾನ ಹತ್ತಿರ ವಿದ್ಯುತ್ ಕಂಬವು ವಾಲಿರುವುದರಿಂದ ಸರಿಪಡಿಸಲು ಕೋರಿರುತ್ತಾರೆ. ಕ್ರಮವನ್ನು ಕೈಗೊಳ್ಳುವುದಾಗಿ ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಅಧಿಕಾರಿರವರು ತಿಳಿಸಿದರು

ಕ್ರಮ : ಬೆಸ್ಕಾಂ ಇಲಾಖೆ

3ನೇ ಅಡ್ಡರಸ್ತೆ ಕಸ್ತೂರಿಬಾ ಕಾಲೋನಿಯಲ್ಲಿ ಕಲ್ವರ್ಟ್ ಕುಸಿದಿದ್ದು ಅದನ್ನು ಸರಿಪಡಿಸುವಂತೆ, 4ನೇ ಅಡ್ಡರಸ್ತೆ, ವಿನೋಭ ಕಾಲೋನಿ, 6ನೇ ಅಡ್ಡರಸ್ತೆ, ಮುನೇಶ್ವರ ಬ್ಲಾಕಿನಲ್ಲಿ ಕೊಳವೆ ಬಾವಿಗಳ ಪೈಪ್ ಲೈನ್‌ಗಳನ್ನು ಅಳವಡಿಸಲು, ವೀರಣ್ಣಗುಡ್ಡೆ ಸ್ಮಶಾನದಲ್ಲಿ ಶೌಚಾಲಯವನ್ನು ನಿರ್ಮಿಸಲು ಮತ್ತು ವೀರಭದ್ರಸ್ವಾಮಿ ಬಡಾವಣೆಯ 4ನೇ ಅಡ್ಡರಸ್ತೆಯಲ್ಲಿ ತಡೆಗೋಡೆ ನಿರ್ಮಿಸಲು ಸಾರ್ವಜನಿಕರು ತಿಳಿಸಿದರು, ಮುಂದಿನ ಅನುದಾನದಲ್ಲಿ ಕಾಮಗಾರಿಯನ್ನು ಕೈಗೊಳ್ಳುವುದಾಗಿ ತಿಳಿಸಲಾಗಿದೆ ಹಾಗೂ 5ನೇ ಮುಖ್ಯರಸ್ತೆಯ ಅವಲಹಳ್ಳಿಯಲ್ಲಿ ರಸ್ತೆಗಳಲ್ಲಿ ಗುಂಡಿಗಳು ಬಿದ್ದಿರುವುದಾಗಿ ತಿಳಿಸಿದರು ಗುಂಡಿಗಳನ್ನು ಮುಚ್ಚಿರುವುದಾಗಿ ಸಭೆಯಲ್ಲಿ ತಿಳಿಸಲಾಗಿರುತ್ತದೆ.

ಕ್ರಮ : ಕಾಮಗಾರಿ ಇಲಾಖೆ

ರಂಗನಾಥ ಕಾಲೋನಿಗೆ ಮೈಸೂರು ರಸ್ತೆಯಿಂದ ಹೆಚ್ಚಿನ ವಾಹನ ಓಡಾಡುವುದರಿಂದ ತೊಂದರೆಯಾಗುತ್ತಿದೆ ಎಂದು ತಿಳಿಸಿದರು.

ಕ್ರಮ : ಬ್ಯಾಟರಾಯನಪುರ ಟ್ರಾಫಿಕ್ ಪೊಲೀಸ್ ಇಲಾಖೆ

ಅಪಾರ್ಟ್‌ಮೆಂಟ್ ರಸ್ತೆಯಲ್ಲಿ ಮತ್ತು ರಂಗನಾಥ ಕಾಲೋನಿಯ ಖಾಲಿ ನಿವೇಶನದಲ್ಲಿ ಸಾರ್ವಜನಿಕರು ಕಸವನ್ನು ಹಾಕುತ್ತಿದ್ದಾರೆ ಇದರ ಬಗ್ಗೆ ಕ್ರಮವನ್ನು ಕೈಗೊಳ್ಳಲು ಕೋರಿರುತ್ತಾರೆ.

ಕ್ರಮ : ಘನತ್ಯಾಜ್ಯ ನಿರ್ವಹಣೆ ಕೋಶ

ಸೊಳ್ಳೆ ನಿಯಂತ್ರಣಕ್ಕಾಗಿ ಫಾಗಿಂಗ್ ಮಾಡಲು ಮತ್ತು ಆಸ್ಪತ್ರೆಯನ್ನು ವಾರ್ಡ್ ಕಛೇರಿಯ ಹತ್ತಿರ ಶಿಫ್ಟ್ ಮಾಡುವಂತೆ ಸಾರ್ವಜನಿಕರು ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಆರೋಗ್ಯ ಅಧಿಕಾರಿಯವರಿಗೆ ಮತ್ತೊಮ್ಮೆ ತಿಳಿಸಲಾಗಿರುತ್ತದೆ.

ಕ್ರಮ : ಆರೋಗ್ಯ ಇಲಾಖೆ

ಖಾತೆಗಳನ್ನು ಮಾಡಿಕೊಡಲು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು, ಸದರಿ ವಿಷಯಕ್ಕೆ ಸಂಬಂಧಪಟ್ಟ ಕಂದಾಯ ಅಧಿಕಾರಿಯವರಿಗೆ ತಿಳಿಸಲಾಗಿರುತ್ತದೆ.

**ಕ್ರಮ : ಕಂದಾಯ ಇಲಾಖೆ**

ಕಸ್ತೂರಿಬಾ ಕಾಲೋನಿ 21ನೇ ಅಡ್ಡರಸ್ತೆ, 3ನೇ ಅಡ್ಡರಸ್ತೆ ಮತ್ತು 6ನೇ ಅಡ್ಡರಸ್ತೆಗಳಲ್ಲಿ ಮತ್ತು 1ನೇ ಅಡ್ಡರಸ್ತೆ, ನ್ಯೂ ಬಿಡಿಎ ಲೇಔಟ್, ಬೀದಿ ದೀಪಗಳು ಹಾಳಾಗಿದ್ದು ಅದನ್ನು ದುರಸ್ಥಿಪಡಿಸುವಂತೆ ಸ್ಥಳೀಯ ಸಾರ್ವಜನಿಕರು ಸಭೆಯಲ್ಲಿ ದೂರನ್ನು ನೀಡಿದರು, ಅದರಂತೆ ಸಂಬಂಧಪಟ್ಟ ಅಧಿಕಾರಿಯವರಿಗೆ ಸಭೆಯಲ್ಲಿ ತಿಳಿಸಲಾಗಿರುತ್ತದೆ.

**ಕ್ರಮ : ಬೀದಿ ದೀಪಗಳ ಇಲಾಖೆ**

ಸಭೆಯನ್ನು ಕಾರ್ಯದರ್ಶಿಗಳಾದ ಶ್ರೀಮತಿ. ಚೈತ್ರ .ಜಿ.ಎಸ್. ರವರು ವಂದನಾರ್ಪಣೆಯೊಂದಿಗೆ ಮುಕ್ತಾಯ ಮಾಡಿದರು.

ಕಾರ್ಯದರ್ಶಿ
ವಾರ್ಡ್ ಸಂಖ್ಯೆ : 158 (ಗಾಳಿ ಆಂಜನೇಯ ಸ್ವಾಮಿ)

<u>ಪ್ರತಿಯನ್ನು:-</u>

1. ಮಾನ್ಯ ಆಯುಕ್ತರ ಆಪ್ತ ಸಹಾಯಕರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2. ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನೆಗೆ ಸಲ್ಲಿಸಿದೆ.
3. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
4. ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳು ರವರ ಅವಗಾಹನೆಗೆ ಸಲ್ಲಿಸಿದೆ.